## ಗೂಗ್ಲ್ ಗ್ಲಾಸ್ ಕ್ರೇಜ್



ಇದು ತಂತ್ರಜ್ಞಾನ ಆಧಾರಿತ ಕನ್ನಡಕ. ನಿಮ್ಮ ಸ್ಮಾರ್ಟ್‌ಫೋನ್ ಸ್ಕ್ರೀನ್‌ನ ವಿಸ್ತರಣಾ ವಿಭಾಗದಂತೆ ಕೆಲಸ ಮಾಡುತ್ತದೆ. ಅಂದರೆ ಬ್ಲೂಟೂಥ್ ಅಥವಾ ವೈ–ಫಿ ಮೂಲಕ ಸಂಪರ್ಕ ಕಲ್ಪಿಸುತ್ತದೆ. ಗೂಗ್ಲ್ ಪ್ಲಸ್ ಮೂಲಕ ಫೋಟೊ, ವಿಡಿಯೊ ಸೆರೆ ಹಿಡಿಯಬಹುದು. ಫೋನ್ ಕರೆ ಸ್ವೀಕರಿಸುತ್ತದೆ, ಸಂದೇಶ ಕಳಿಸುತ್ತದೆ. ಬೇರೆ ಬೇರೆ ಅಪ್ಲಿಕೇಶನ್‌ಗಳಿಗೆ ಸಂಪರ್ಕ ಕಲ್ಪಿಸಬಹುದು. ಇದಕ್ಕೆ ಗೂಗ್ಲ್ ಅಕೌಂಟ್ ಮತ್ತು ಗೂಗ್ಲ್ ಪ್ಲಸ್ ಅವಶ್ಯಕ. ಗ್ಲಾಸ್ ತಳದ ಕಡೆ ದೃಷ್ಟಿ ಹಾಯಿಸಿದರೆ ರಿಮ್‌ನಲ್ಲಿರುವ ಸ್ಕ್ರೀನ್‌ನಲ್ಲಿ ಬೆಳಕಾಗುತ್ತದೆ. ಕಣ್ಣುಗುಡ್ಡೆ ಹೊರಳಿಸುವುದರಿಂದ ಅಥವಾ ಶಬ್ದಗಳ ಮೂಲಕ ನಿಯಂತ್ರಿಸಬಹುದು. ಮೈಗ್ಲಾಸ್ ಅಪ್ಲಿಕೇಶನ್ ಅನ್ನು ಗೂಗ್ಲ್ ಪ್ಲೇ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಸದ್ಯ ಇದನ್ನು ಅಪ್ಲಿಕೇಶನ್ ಡೆವಲಪರ್‌ಗಳಿಗೆ ಬಿಡುಗಡೆ ಮಾಡಲಾಗಿದ್ದು, ಮುಂದಿನ ವರ್ಷ ಮಾರುಕಟ್ಟೆಯಲ್ಲಿ ಲಭ್ಯ.




## ಲಿನುಕ್ಸ್ ಸಾಫ್ಟ್‌ವೇರ್

ಲಿನುಕ್ಸ್ ಕಂಪ್ಯೂಟರ್‌ನಲ್ಲಿ ಹಲವಾರು ಅಪ್ಲಿಕೇಶನ್‌ಗಳು ಹಾಗೂ ಸಾಫ್ಟ್‌ವೇರ್‌ಗಳು ಬಳಕೆದಾರರಿಗೆ ಅನುಕೂಲ ಒದಗಿಸಿ ಕೊಟ್ಟಿವೆ. ನಿಮ್ಮದೇ ಆದ ಚಲನಚಿತ್ರವನ್ನು ನಿರ್ಮಿಸಿ ಎಡಿಟ್ ಮಾಡಲು http://www.openshot.org/download ಬಳಸಬಹುದು. ಲೈಬ್ರಾಫೀಸ್‌ನಿಂದ ನೇರವಾಗಿ ಪಿಡಿಎಫ್ ಸೃಷ್ಟಿಸಬಹುದು. ಇದಕ್ಕೆ http://www.libreoffice.org/download ನೆರವಿಗೆ ಬರುತ್ತದೆ. ಸಂಗೀತದ ರೀಮಿಕ್ಸ್‌ಗೆ Mixxx. http://www.mixxx.org /download ಲಭ್ಯ.




## ಅಂಧರಿಗಾಗಿ ಅಪ್ಲಿಕೇಶನ್

ಅಂಧರು ಹಾಗೂ ಅಲ್ಪಸ್ವಲ್ಪ ದೃಷ್ಟಿ ಹೊಂದಿದವರು ಕೂಡಾ ತಮ್ಮ ಫೋಟೊಗ್ರಫಿ ಕೌಶಲ್ಯವನ್ನು ಹೆಚ್ಚಿಸಿಕೊಳ್ಳಲು ಅನುಕೂಲವಾಗುವಂತಹ ಅಪ್ಲಿಕೇಶನ್ ಅನ್ನು ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯ ಅಭಿವೃದ್ಧಿಪಡಿಸಿದೆ. ಸ್ಮಾರ್ಟ್‌ಫೋನ್ ಸ್ಕ್ರೀನ್ ಮೇಲೆ ಬೆರಳಿನಿಂದ ಒಮ್ಮೆ ಮೇಲ್ಮುಖವಾಗಿ ಎಳೆದರಾಯಿತು. ಇದು ಶಬ್ದಗಳ ಮೂಲಕ ನಿರ್ದೇಶನ ನೀಡುತ್ತ ಹೋಗುತ್ತದೆ. ಹಾಗೆಯೇ ಮುಖವನ್ನು ಗುರುತಿಸುವ ಕೌಶಲ್ಯ ಹೊಂದಿದೆ. ಜೂನ್‌ನಲ್ಲಿ ಉಳಿದ ವಿವರ ಹಾಗೂ ಅಪ್ಲಿಕೇಶನ್ ಹೆಸರನ್ನು ಬಹಿರಂಗ ಮಾಡಲಾಗುವುದು ಎಂದು ವಿವಿ ಸಂಶೋಧಕರು ಹೇಳಿದ್ದಾರೆ.




## ಸರಳ ಫೇಸ್‌ಬುಕ್

ಫೇಸ್‌ಬುಕ್ ಅನ್ನು ವರ್ಷಗಟ್ಟಲೆ ಬಳಸುವವರಿಗೂ ಕೆಲವೊಂದು ಸರಳ ಅಂಶಗಳು ಗೊತ್ತಿಲ್ಲ. ಉದಾಹರಣೆಗೆ ನೀವು ಆಫ್‌ಲೈನ್ ಆಗಿ ಎಲ್ಲಾ ಸ್ನೇಹಿತರಿಂದ ದೂರವಿರುವ ಬದಲು, ಯಾರು ಬೇಡವೋ ಆ ಸ್ನೇಹಿತರಿಂದ ಮಾತ್ರ ಆಫ್‌ಲೈನ್ ಆಗಬಹುದು. ಆ ಸ್ನೇಹಿತನ ಚ್ಯಾಟ್ ಮೆನು ತೆರೆದು ಸೆಟಿಂಗ್ ಬಟನ್ ಮೇಲೆ ಕ್ಲಿಕ್ ಮಾಡಿ. ಅಲ್ಲಿ 'ಟರ್ನ್ ಆಫ್ ಚ್ಯಾಟ್ ಫಾರ್ .. ' ಮುಂದೆ ಹೆಸರು ಬರುತ್ತದೆ. ಅಲ್ಲಿ ಕ್ಲಿಕ್ ಮಾಡಿದರೆ ಆ ಸ್ನೇಹಿತನ ಕಾಟದಿಂದ ತಪ್ಪಿಸಿಕೊಳ್ಳಬಹುದು.

■ ಎಸ್. ತುಂಬೆ